**ಮಿಸ್ ನಂಃ 6-18**
**ಪಿ ಡಬ್ಲ್ಯೂ ಃ 1**

**ದಿಃ 23-03-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಜಿ ಪಿ ವಕೀಲರಿಂದ**

9. ನನ್ನ ತಂದೆಯ ಹೆಸರು ಮುನಿಯಪ್ಪ ಎಂದರೆ ನಿಜ. ನನ್ನ ತಾಯಿಯ ಹೆಸರು ರಂಗಮ್ಮ ಎಂದರೆ ನಿಜ. ಮುನಿಯಪ್ಪ ಹಾಗೂ ರಂಗಮ್ಮರವರಿಗೆ 8 ಜನ ಮಕ್ಕಳು ಎಂದರೆ ನಿಜ. ವೆಂಕಟಮ್ಮ ಹಾಗೂ ಚನ್ನಮ್ಮರವರು ತಮ್ಮ ತಂದೆಯ ಆಸ್ತಿಯಲ್ಲಿ ಭಾಗ ಬೇಕೆಂದು 1987 ರಲ್ಲಿ ಮಾನ್ಯ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು ಎಂದರೆ ನಿಜ. ಆ ದಾವೆ ವಿಚಾರಣೆ ಆಗಿ ಭಾಗ ಕೊಡಬೇಕೆಂದು ತೀರ್ಮಾನ ಆಗಿರುತ್ತದೆ ಎಂದರೆ ನಮ್ಮನ್ನು ವಿಚಾರಣೆಗೆ ಒಳಪಡಿಸಿಲ್ಲ ಎಂದು ಹೇಳುತ್ತಾರೆ. 1987 ರಲ್ಲಿ ಆ ದಾವೆಯನ್ನು ನನ್ನ ತಂದೆ ನಡೆಸುತ್ತಿದ್ದು ಆಗ ನನ್ನ ವಯಸ್ಸು 25 ವರ್ಷ ಆಗಿರಬಹುದು. ಆ ದಾವೆಯ ಬಗ್ಗೆ ನನ್ನ ತಂದೆಗೆ ಮಾಹಿತಿ ಚೆನ್ನಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ವೆಂಕಟಮ್ಮ ಮತ್ತು ಚೆನ್ನಮ್ಮ ಗಾಳಹನುಮಯ್ಯರವರ ಮಕ್ಕಳಾಗಿರುತ್ತಾರೆ. ನನ್ನ ತಂದೆ ದೊಡ್ಡವೆಂಕಟಯ್ಯ ಅಲಿಯಾಸ್ ವೆಂಕಟಯ್ಯ ರವರ ಮಗ ಆಗಿರುತ್ತಾರೆ. ನನ್ನ ಅಜ್ಜ ಮತ್ತು ದೊಡ್ಡವೆಂಕಟಯ್ಯ ಒಟ್ಟು ಮೂರು ಜನ ಸಹೋದರರು ಇದ್ದು ಇನ್‌ನೂಬ್ಬ ಸಹೋದರನ ಹೆಸರು ಚಿಕ್ಕವೆಂಕಟಯ್ಯ ಆಗಿರುತ್ತದೆ. ಚಿಕ್ಕವೆಂಟಕಯ್ಯ ತೀರಿಕೊಂಡಿರುತ್ತಾರೆ. ಈ ಮೂವರು ಜನರನ್ನು ಬಿಟ್ಟು ಇನ್ನೊಬ್ಬ ಸಹೋದರ ಅಂದರೆ ದೊಡ್ಡವೆಂಕಟಯ್ಯರವರ ಅಣ್ಣ ಇದ್ದು ಅವರು ದತ್ತು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಇನ್ನೊಬ್ಬ ಸಹೋದರನಾದ ತಿಮ್ಮಪ್ಪರವರನ್ನು ತಮ್ಮ ಅಕ್ಕನ ಆಸ್ತಿಗೆ ದತ್ತು ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ.

10. 1987 ರ ದಾವೆಯ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ನನ್ನ ತಂದೆ ತೀರಿಕೊಂಡ ನಂತರ ಆ ದಾವೆಯನ್ನು ನಾವೇ ನಡೆಸಿರುತ್ತೇವೆ ಎಂದು ಹೇಳುತ್ತಾರೆ. ಆ ದಾವೆ ನಾವು ಹಾಜರಾದ ನಂತರ ಮತ್ತು ನನ್ನ ತಂದೆ ತೀರಿಕೊಂಡ ನಂತರ ತೀರ್ಮಾನ ಆಗಿರುತ್ತದೆ. 1987 ರ ದಾವೆಯನ್ನು ನಾನು ನನ್ನ ಸಹೋದರರು ಮತ್ತು ನನ್ನ ತಾಯಿ ಸೇರಿ ನಡೆಸಿರುತ್ತೇವೆ. ಆ ದಾವೆಯಲ್ಲಿ ನನ್ನ ತಂದೆ ತೀರಿಕೊಂಡ ನಂತರ ನಮಗೆ ನೋಟಿಸ್ ಬಂದ ನಂತರ ನಾವು ಆ ದಾವೆಯಲ್ಲಿ ಹಾಜರಾಗಿರುತ್ತೇವೆ. ನನ್ನ ತಂದೆ 2004 ರಲ್ಲಿ ತೀರಿಕೊಂಡಿದ್ದು 1 ತಿಂಗಳ ನಂತರ ನಮಗೆ ಹಾಜರಾಗಲು ನೋಟಿಸ್ ಬಂದಿರುತ್ತದೆ. ಆ ದಾವೆ ನಾವು ಹಾಜರಾದ 2 ತಿಂಗಳಿಗೆ ತೀರ್ಮಾನ ಆಗಿರುತ್ತದೆ. ಆ ದಾವೆ 2004 ಅಥವಾ 2005 ರಲ್ಲಿ ತೀರ್ಮಾನವಾಗಿರುತ್ತದೆ. ಆ ದಾವೆಯ ಆದೇಶದ ವಿರುದ್ಧ ನನ್ನ ತಂದೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನಾವೇ ಮೇಲ್ಮನವಿ ಸಲ್ಲಿಸಿದ್ದೆವು ಎಂದು ಹೇಳುತ್ತಾರೆ. ಆ ಮೇಲ್ಮನವಿಯ ಬಗ್ಗೆ ನಾವು ಗಮನ ಹರಿಸದೇ ಇದ್ದುದ್ದರಿಂದ ಅದು ವಜಾ ಆಗಿರುತ್ತದೆ. ಆ ಮೇಲ್ಮನವಿ 2005-06 ರಲ್ಲಿ ವಜಾ ಆಗಿರುತ್ತದೆ. ಆ ಮೇಲ್ಮನವಿಯಲ್ಲಿ ತಮಗೆ ವಿಚಾರಣೆ ನಡೆಸಲು ಆದೇಶ ಮಾಡಬೇಕೆಂದು ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ. ಆ ಆರ್ ಎ ನಂ 35/2005 ಆಗಿರುತ್ತದೆ ಎಂದರೆ ನಿಜ. ಆ ಮೇಲ್ಮನವಿ ವಜಾ ಆದ ನಂತರ

ನಮ್ಮ ವಕೀಲರ ನಿರ್ದೇಶನದಂತೆ ನಾವು ಮಿಸ್ ಕೇಸನ್ನು ಹೂಡಿರುತ್ತೇವೆ. ಮಿಸ್ ಕೇಸನ್ನು ಹೂಡುವಂತೆ ನಮಗೆ 2005 ರಲ್ಲಿ ವಕೀಲರು ಹೇಳಿರುತ್ತಾರೆ. ನಾವು 2005 ರಲ್ಲಿ ಮಿಸ್ ಕೇಸನ್ನು ದಾಖಲು ಮಾಡಲಿಲ್ಲ ಎಂದರೆ ಸರಿಯಲ್ಲ. ಆ ಮಿಸ್ ದಾವೆಯನ್ನು ನಾವು 2011 ರಲ್ಲಿ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಮಿಸ್ ದಾವೆಯನ್ನು 6 ವರ್ಷ ಆದ ನಂತರ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಮಿಸ್ ದಾವೆಯನ್ನು 6 ವರ್ಷ ಆದ ನಂತರ 2011 ರಲ್ಲಿ ಹೂಡಿದ್ದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮಿಸ್ ದಾವೆಗೆ 1735 ದಿನ ಡಿಲೇ ಇದ್ದು ಅದಕ್ಕೆ ಸಕಾರಣ ಕೊಟ್ಟಿಲ್ಲ ಎಂದರೆ ಸರಿಯಲ್ಲ.

11. ಆರ್ ಎ 35/2005 ದಿನಾಂಕ 01-08-2006 ರಲ್ಲಿ ವಜಾ ಆಗಿರುತ್ತದೆ ಎಂದರೆ ನಿಜ. 2007 ರಲ್ಲಿ ಮಿಸ್ 10/2005 ನ್ನು ಹೂಡಿದ್ದೆವು ಎಂದರೆ ನಿಜ. ಡಿಕ್ರಿಯನ್ನು ರದ್ದುಪಡಿಸಬೇಕೆಂದು ಹೂಡಿದ್ದ ದಾವೆಯ ಒ ಎಸ್ 46/1987 ವಜಾ ಆಗಿರುತ್ತದೆ ಎಂದರೆ ನಿಜ. ಆ ದಾವೆ ದಿನಾಂಕಃ 05-04-2011 ರಲ್ಲಿ ವಜಾ ಆಗಿದ್ದು ಅದರ ವಿರುದ್ದ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

12. ಎಂ ಎ ವಜಾ ನಂತರ ಎಷ್ಟು ದಿನಕ್ಕೆ ಈ ಅರ್ಜಿಯನ್ನು ಸಲ್ಲಿಸಲಾಗಿದೆ ಗೊತ್ತಿಲ್ಲ. ಈ ಎಲ್ಲಾ ಮೊಕದ್ದಮೆಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇತ್ತು ಎಂದರೆ ನಿಜ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**